**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

**(ಚಾ.ಸಾ.11/ಪ್ರಾ.ಸಾ.7)**

ತಾಃ 21.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಧ್ರುವಕುಮಾರ್ |
| ತಂದೆಯ ಹೆಸರು | ವೆಂಕಟೇಶಪ್ಪ |
| ವಯಸ್ಸು | 49 ವರ್ಷ |
| ಉದ್ಯೋಗ | ಇಲ್ಲ |
| ವಾಸ ಸ್ಥಳ | ಮುತ್ಯಾಲನಗರ |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಚಾಸಾ.12 ರವರ ಪರಿಚಯ ಇದ್ದು, ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುತ್ತೇನೆ. 2018 ನೇ ಇಸವಿ 26 ನೇ ತಾರೀಖಿನಂದು 1 ನೇ ತಿಂಗಳು ಅಥವಾ ಬೇರೆ ತಿಂಗಳಿನಲ್ಲಿ ನಾನು ವಿನಾಯಕ ಲೇಔಟ್, ಶೆಟ್ಟಿಹಳ್ಳಿ ರಸ್ತೆಯಲ್ಲಿ ಇರುವ ಆಸ್ಪತ್ರೆಗೆ ಹೋಗಿದ್ದೇನು. ಆಗ ಒಬ್ಬ ಪೊಲೀಸ್ ಪೇದೆ ನನಗೆ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಅದಕ್ಕಾಗಿ ನಾನು ಹಾಗೂ ಚಾಸಾ.12 ರವರು ಠಾಣೆಗೆ ಹೋಗಿದ್ದೇವು. ಠಾಣೆಯಲ್ಲಿ ಇದ್ದ ಆರೋಪಿಯನ್ನು ತೋರಿಸಿ ಆತ ಒಂದು

ಸರ ಕಿತ್ತುಕೊಳ್ಳಲು ಹೋದಾಗ ಮಹಿಳೆಯ ಕತ್ತಿಗೆ ಪೆಟ್ಟಾಗಿದ್ದು ಅದಕ್ಕಾಗಿ ಮಹಜರ್ ಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ ಪೊಲೀಸರು ನೋಟಿಸ್ ನೀಡಿದ್ದು ಅದಾದ ಮೇಲೆ ನಮ್ಮನ್ನು ಮಹಜರ್ ಗೆ ಕರೆದುಕೊಂಡು ಹೋದರು. ಆ ಮಹಿಳೆಯ ಮನೆ ಶೆಟ್ಟಿಹಳ್ಳಿ ರಸ್ತೆ ವಿನಾಯಕ ನಗರದಲ್ಲಿ ಇದ್ದು ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳವನ್ನು ನಮಗೆ ತೋರಿಸಿ ಆ ಮಹಿಳೆಯ ಮಾಂಗಲ್ಯ ಸರ ಅರ್ಧವನ್ನು ಆರೋಪಿ ಕಿತ್ತುಕೊಂಡು ಹೋಗಿದ್ದು ಉಳಿದ ಅರ್ಧ ಮಹಿಳೆಯ ಕೈನಲ್ಲಿ ಇರುವುದಾಗಿ ಹೇಳಿ ಮಹಜರ್ ಜರುಗಿಸಿರುತ್ತಾರೆ.

2. ನಂತರ ಆರೋಪಿ ಚಾಕು ಹಾಕಿದ ಸ್ಥಳವನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ಸ್ವಲ್ಪ ಮುಂದಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಗಾಡಿ ನಿಲ್ಲಿಸಿ ಒಂದು ಜಾಗದಲ್ಲಿ ಬಿದಿರು ಮೇಳದಲ್ಲಿ ಒಂದು ರೇಸರ್ ಇದ್ದು ಅದನ್ನು ಆರೋಪಿ ತೋರಿಸಿರುತ್ತಾರೆ. ಪೊಲೀಸರು ಮಹಜರ್ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ. ಮೊದಲು ಕರೆದುಕೊಂಡು ಹೋಗಿದ್ದ ಸ್ಥಳ ಪೆಟ್ಟಾಗಿದ್ದ ಮಹಿಳೆಯ ಮನೆ ಆಗಿರುತ್ತದೆ. ಸಾಕ್ಷಿದಾರರು ಮಹಜರ್ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5, 5(ಎ) ಎಂದು ಗುರುತಿಸಲಾಯಿತು. ನಾವು ಆ ದಿನ ಬೆಳಿಗ್ಗೆ 7.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದು ಎಲ್ಲಾ ಕ್ರಮ ಮುಗಿಸುವಷ್ಟರಲ್ಲಿ ಬೆಳಿಗ್ಗೆ 10.00 ರಿಂದ 10.30 ಸಮಯ ಆಗಿತ್ತು. ಸಾಕ್ಷಿದಾರರು ಮು.ಮಾ.3 ರೇಸರ್ ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ಮು.ಮಾ.3 ವಸ್ತುವಿನ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿ ಇರುವುದನ್ನು ನೋಡಿ

ಗುರುತಿಸಿರುತ್ತಾರೆ. ಪೊಲೀಸರು ಮೇಲ್ಕಂಡಂತೆ ಮಾಡಿದ ಕ್ರಮಗಳ ಬಗ್ಗೆ ನನ್ನ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿಪರ ಶ್ರೀ. ಎ ಆರ್ ವಕೀಲರಿಂದಃ**

3. ಈ ಪ್ರಕರಣದ ಚಾಸಾ.2 ರವರು ನನ್ನ ಸಂಬಂಧಿಕರಾಗಿದ್ದು ಅವರಿಗೆ ಪೆಟ್ಟಾಗಿದ್ದ ವಿಚಾರ ತಿಳಿದು ಬಂದ ಕಾರಣ ನಾನು ಆಸ್ಪತ್ರೆಗೆ ಅವರನ್ನು ನೋಡಲು ಹೋಗಿದ್ದೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ಚಾಸಾ.2 ರವರನ್ನು ನೋಡಲು ಆಸ್ಪತ್ರೆಗೆ ಬೆಳಿಗ್ಗೆ 5.30 ಕ್ಕೆ ಹೋಗಿದ್ದೇನು. ನಾನು ವಾಸವಿರುವ ಸ್ಥಳದಿಂದ ಶೆಟ್ಟಿಹಳ್ಳಿ 6 ರಿಂದ 7 ಕಿ.ಮೀಟರ್ ದೂರ ಇರುತ್ತದೆ. ಘಟನೆ ಆದ ವಿಚಾರ ನನಗೆ ಅದೇ ದಿನ ತಿಳಿದು ಬಂದಿದ್ದು ಚಾಸಾ.2 ರವರನ್ನು ನೋಡಲು ತಕ್ಷಣ ಹೋಗಿರಲಿಲ್ಲ. ನನ್ನನ್ನು ಕರೆದ ಪೊಲೀಸ್ ಪೇದೆ ಇವರ ಹೆಸರು ನನಗೆ ತಿಳಿದಿಲ್ಲ. ಚಾಸಾ.12 ಶಂಕರ್ ಇವರು ನನ್ನ ಅಣ್ಣನ ಮಗನಾಗಿರುತ್ತಾರೆ.

4. ನಾನು ಠಾಣೆಗೆ ಹೋದ ಸಮಯದಲ್ಲಿ ಆರೋಪಿ ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಿಂದ ಜೀಪಿನಲ್ಲಿ ಚಾಸಾ.2 ರವರ ಮನೆಯ ಬಳಿ ಹೋಗಿದ್ದೇವು. ಆ ಸಮಯದಲ್ಲಿ ನನ್ನ ಜೊತೆ ಚಾಸಾ.12 ರವರು ಹಾಗೂ ಮೂರು ಜನ ಪೊಲೀಸರು ಇದ್ದು ಪೊಲೀಸರ ಹೆಸರು ನನಗೆ ತಿಳಿದಿಲ್ಲ. ನನಗೆ

ನೋಟಿಸ್ ಅನ್ನು ಇನ್ಸ್ ಪೆಕ್ಟರ್ ರವರು ನೀಡಿದ್ದು ಅವರ ಹೆಸರು ನನಗೆ ತಿಳಿದಿಲ್ಲ. ನಾವು ಸ್ಥಳಕ್ಕೆ ಹೋದಂತಹ ವಾಹನದ ಸಂಖ್ಯೆ ತಿಳಿದಿಲ್ಲ. ಪೊಲೀಸರು ಚಾಸಾ.2 ರವರ ಮನೆಯ ಬಳಿ ಬರವಣಿಗೆ ಮಾಡಿರುತ್ತಾರೆ. ಸದರಿ ಬರವಣಿಗೆಗೆ ಚಾಸಾ.2 ರವರ ಮನೆಯ ಬಳಿ ನಾನು ಸಹಿ ಹಾಕಿಲ್ಲ ಆದರೆ ಎಲ್ಲಾ ಮುಗಿದ ಮೇಲೆ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ಮಾಡಿದ ಬರವಣಿಗೆಗೆ ನಾನು ಚಾಕು ಸಿಕ್ಕ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ.

5. ಚಾಕು ಸಿಕ್ಕ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಪುನಃ ಶೇವಿಂಗ್ ಮಾಡುವ ರೇಸರ್ ಸಿಕ್ಕ ಸ್ಥಳ ಎಂದು ನುಡಿದಿರುತ್ತಾರೆ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಚಾಕು ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಹೆಚ್ಚಿನ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.